

بِسۡمِ اللّٰہِ الرَّحۡمٰنِ الرَّحِیۡمِ

# ತಬ್‌ಲೀಗ್ ಕಡೆಗೆ ಗಮನ ಹರಿಸಿ.

# ನಿಮ್ಮ ಎಲ್ಲ ವರ್ತನೆಗಳಲ್ಲೂ ಜಮಾಅತಿನ ಗೌರವ ಎದ್ದು ಕಾಣುವಂತಾಗಲಿ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **08-07-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈಗ ನಾನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರಿಗೆ ಸಂಬಂಧಿಸಿ ಕೆಲವು ವಿಷಯಗಳನ್ನು ಪ್ರಸ್ತಾಪಿಸುವೆನು. ಅವುಗಳಲ್ಲಿ ಉಪದೇಶಗಳು ಅಡಕವಾಗಿವೆ. ಕೆಲವು ವಿಷಯಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಅವರು ಹೇಳಿದ ಪ್ರಸ್ತಾಪನೆಗಳಾಗಿವೆ. ಮೊದಲನೆಯ ವಿಷಯ ತಬ್ಲೀಗ್‌ಗೆ ಸಂಬಂಧಿಸಿದೆ. ಹಿಂದೂಸ್ಥಾನದ ವಿಭಜನೆಯ ನಂತರ ಜಲ್ಸ ಸಾಲಾನದ ಸಂದರ್ಭದಲ್ಲಿ ಖಾದಿಯಾನ್‌ನ ಜಮಾಅತಿಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಸಂದೇಶ ಕಳುಹಿಸಿದ್ದರು. ಆ ಸಂದೇಶದಲ್ಲಿ ಅವರು ಹೀಗೆ ಹೇಳಿದ್ದರು: ನಿಮ್ಮ ಕೆಲಸ ತಬ್ಲೀಗ್ ಮಾಡುವುದಾಗಿದೆ. ನೀವು ತಬ್ಲೀಗ್ ಮಾಡುವುದಕ್ಕೆ ಬಹಳ ಕಷ್ಟಪಟ್ಟು ಕೆಲಸ ಮಾಡಬೇಕು. ನಿಸ್ಸಂದೇಹವಾಗಿಯೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಅಲ್ಲಾಹನು ಇಲ್‌ಹಾಮ್ ಮೂಲಕ ತಿಳಿಸಿದ್ದನು– ನಾನು ನಿನ್ನ ಸಂದೇಶವನ್ನು ಲೋಕದ ಎಲ್ಲೆಗಳ ತನಕ ತಲಪಿಸುವೆನು ಎಂದು. ಆದರೆ ಅದರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಹ್ಮದಿಯಾ ಜಮಾಅತಿನ ಜನರು ತಬ್ಲೀಗ್ ಮಾಡಬೇಕೆಂದು ಅವರ ಗಮನ ಸೆಳೆದಿದ್ದರು. ಅವರು ಹೇಳಿದರು: ನನ್ನ ಗ್ರಂಥಗಳಿಂದ ಜ್ಞಾನ ಗಳಿಸಿರಿ ಮತ್ತು ತಬ್ಲೀಗ್ ಮಾಡಿರಿ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಹಾಬ (ಶಿಷ್ಯರು) ತಬ್ಲೀಗ್ ಮಾಡಿದ ಹಾಗೆ ನೀವು ಸಹ ತಬ್ಲೀಗ್ ಮಾಡಿರಿ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಜಲ್ಸಸಾಲಾನ ಖಾದಿಯಾನಿಗೆ ಕಳುಹಿಸಿದ ಸಂದೇಶದಿಂದ ತಬ್ಲೀಗ್‌ಗೆ ಸಂಬಂಧಿಸಿದ ಭಾಗವನ್ನು ನಿಮ್ಮ ಮುಂದೆ ಇರಿಸುತ್ತೇನೆ. ಖಾದಿಯಾನ್‌ನಲ್ಲಿ ಆಗ ಉಳಿದಿರುವ ಅಹ್ಮದಿಯರ ಸಂಖ್ಯೆ ಬಹಳ ಕಡಿಮೆ ಇದ್ದರೂ ಮತ್ತು ಸಾಧನ ಸಂಪತ್ತು ಸೀಮಿತವಾಗಿದ್ದರೂ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಈ ಮುಖ್ಯ ಹೊಣೆಗಾರಿಕೆ ಬಗ್ಗೆ ಖಾದಿಯಾನ್‌ನಲ್ಲಿದ್ದ ದರ್‌ವೇಶ್‌ಗಳಿಗೆ ಧೈರ್ಯ ನೀಡಿದರು ಮತ್ತು ಅವರಿಗೆ ಧೈರ್ಯ ನೀಡಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ವಾದ ಪ್ರಕಟಿಸಿದ ಆರಂಭದ ಕಾಲದಲ್ಲಿದ್ದ ಸ್ಥಿತಿಯ ಬಗ್ಗೆ ಪ್ರಸ್ತಾಪಿಸಿದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಖಾದಿಯಾನಿನಲ್ಲಿದ್ದ ಅಹ್ಮದಿ ದರ್‌ವೇಶ್‌ಗಳೊಂದಿಗೆ ಹೇಳಿದರು: ಈಗ ಖಾದಿಯಾನಿನಲ್ಲಿರುವ ನಿಮ್ಮ ಸಂಖ್ಯೆ ಬರೇ ಮುನ್ನೂರ ಹದಿಮೂರು ಆಗಿದೆ. ಆದರೆ ನಿಮಗೆ ನೆನಪಿರಬಹುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಖಾದಿಯಾನ್‌ನಲ್ಲಿ ಅಲ್ಲಾಹನು ನಿರ್ದೇಶಿಸಿದ ಕೆಲಸಗಳನ್ನು ಪ್ರಾರಂಭಿಸಿದಾಗ ಖಾದಿಯಾನ್‌ನಲ್ಲಿದ್ದ ಅಹ್ಮದಿಯರ ಸಂಖ್ಯೆ ಕೇವಲ ಎರಡು ಅಥವಾ ಮೂರು ಮಾತ್ರವಾಗಿತ್ತು. ಏನಿದ್ದರೂ ಮುನ್ನೂರು ಜನರು ಮೂವರಿಗಿಂತ ಖಂಡಿತವಾಗಿಯೂ ಹೆಚ್ಚಿನ ಸಂಖ್ಯೆಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಾದಿಸಿದ ಕಾಲದಲ್ಲಿ ಖಾದಿಯಾನಿನ ಒಟ್ಟು ಜನಸಂಖ್ಯೆ ಒಂದು ಸಾವಿರದ ಒಂದು ನೂರು ಇತ್ತು. ಇದರ ಪ್ರಮಾಣ ಹೇಗೆಂದರೆ, ಮುನ್ನೂರ ಅರುವತ್ತಾರರಲ್ಲಿ ಒಂದು ಆಗುತ್ತದೆ. ಎಂದರೆ ಒಬ್ಬ ಅಹ್ಮದಿಯ ಎದುರಿಗೆ ಮುನ್ನೂರ ಅರುವತ್ತಾರು ಜನರು. ಈಗ ಈ ಸಂದೇಶ ಕಳುಹಿಸುವ ಸಂದರ್ಭದಲ್ಲಿ ಖಾದಿಯಾನಿನ ಜನಸಂಖ್ಯೆ ಹನ್ನೆರಡು ಸಾವಿರ ಎಂದು ಗಣಿಸುವುದಾದರೂ ಈಗ ಖಾದಿಯಾನಿನಲ್ಲಿರುವ ಅಹ್ಮದಿಯರ ನಿಷ್ಪತ್ತಿ ಮುವತ್ತಾರರಲ್ಲಿ ಒಂದು ಆಗುತ್ತದೆ. ಎಂದರೆ ಒಬ್ಬ ಅಹ್ಮದಿಯ ಎದುರಿಗೆ ಮುವತ್ತಾರು ಜನರಿದ್ದಾರೆಂದಾಗುತ್ತದೆ. ಹಿಂದೆ ಒಬ್ಬ ಅಹ್ಮದಿ ಮುನ್ನೂರ ಅರುವತ್ತಾರು ಜನರೆದುರಿಗೆ ಇದ್ದನು. ಇದರಿಂದ ಸ್ಪಷ್ಟವಾಗುವುದೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಕೆಲಸ ಪ್ರಾರಂಭಿಸಿದ ಕಾಲಕ್ಕೆ ಹೋಲಿಸಿದರೆ ಈಗ ನಿಮ್ಮ ಶಕ್ತಿ ಹತ್ತು ಪಟ್ಟು ಹೆಚ್ಚಿಗೆ ಇದೆ. ಇನ್ನೊಂದು ವಿಷಯವೇನೆಂದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕೆಲಸ ಪ್ರಾರಂಭಿಸಿದ ಕಾಲದಲ್ಲಿ ಖಾದಿಯಾನಿನ ಹೊರಗೆ ಯಾವುದೇ ಅಹ್ಮದಿಯಾ ಜಮಾಅತ್ ಶಾಖೆ ಇರಲಿಲ್ಲ. ಆದರೆ ಈಗ ಹಿಂದೂಸ್ಥಾನದಲ್ಲಿ ಅನೇಕ ಸ್ಥಳಗಳಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿತವಾಗಿವೆ. ಆ ಜಮಾಅತ್‌ಗಳನ್ನು ಜಾಗರೂಕರನ್ನಾಗಿ ಮಾಡುವುದು, ಅವುಗಳನ್ನು ಸುವ್ಯವಸ್ಥೆಗೆ ಒಳಪಡಿಸುವುದು, ಹೊಸ ನಿರ್ಧಾರದೊಂದಿಗೆ ಎಬ್ಬಿಸಿ ನಿಲ್ಲಿಸುವುದು, ಅವರ ಶಕ್ತಿಗಳನ್ನು ಜಮಾಯಿಸುವುದು ಅವರು ಇಸ್ಲಾಮ್ ಮತ್ತು ಅಹ್ಮದಿಯ್ಯತ್ತಿನ ಸಂದೇಶವನ್ನು ಹಿಂದೂಸ್ಥಾನದಲ್ಲಿ ನಾಲ್ಕು ದಿಕ್ಕುಗಳಲ್ಲೂ ಹರಡುವಂತೆ ಮಾಡುವುದು ಈಗ ನಿಮ್ಮ ಕೆಲಸವಾಗಿದೆ.

ಖಾದಿಯಾನಿನ ಈಗ ಇರುವ ಜನಸಂಖ್ಯೆಯ ಪ್ರಮಾಣ ಸಹ ಪ್ರಾಯಶಃ ಅದೇ ರೀತಿ ಇರಬಹುದು. ಖಾದಿಯಾನಿನಲ್ಲಿ ಅಹ್ಮದಿಯರ ಸಂಖ್ಯೆ ಸಾವಿರಗಟ್ಟಲೆ ಇದ್ದರೆ ಅನ್ಯರ ಸಂಖ್ಯೆ ಸಹ ಹೆಚ್ಚಾಗಿರಬಹುದು. ಸಾಧನ ಸಂಪತ್ತು ಹಿಂದಿನ ಕಾಲಕ್ಕಿಂತ ಬಹಳ ಹೆಚ್ಚಿಗೆ ಇದೆ. ತಬ್ಲೀಗ್ ಮಾಡುವ ಮಾರ್ಗಗಳು ಸಹ ಅಲ್ಲಾಹನ ಅನುಗ್ರಹದಿಂದ ಬಹಳ ಹೆಚ್ಚಿಗೆ ಇವೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಪರಿಚಯ ವಿವಿಧ ಮಾರ್ಗಗಳ ಮೂಲಕ ಆಗುತ್ತಿವೆ. ಆದರೆ ಕೆಲಸ ಮಾಡುವವರಾದ ವಾಕಿಫೀನೆ ಝಿಂದಗಿ (ತಮ್ಮ ಜೀವಿತವನ್ನು ಜಮಾಅತಿಗೆ ಅರ್ಪಿಸಿದವರು), ಮುರಬ್ಬಿಗಳು ವೈಯ್ಯಕ್ತಿಕವಾಗಿ ತಮ್ಮ ಪ್ರಯತ್ನಗಳನ್ನು ವರ್ಧಿಸಬೇಕು. ಕೆಲವೊಮ್ಮೆ ಮರ್ಧನೆಗೆ ಗುರಿಯಾಗಬೇಕಾಗುತ್ತದೆ. ವಿರೋಧ ಉಂಟಾಗುತ್ತದೆ. ನಾವು ಜಾಣ್ಮೆಯಿಂದ ನಮ್ಮ ತಬ್ಲೀಗ್ ಕೆಲಸವನ್ನು ಮುಂದುವರಿಸಬೇಕಾಗಿದೆ– ಇನ್‌ಶಾಅಲ್ಲಾಹ್. ಈ ವಿಷಯವನ್ನು ಲೋಕದ ಉಳಿದ ದೇಶಗಳ ಅಹ್ಮದಿಯರು ಸಹ ತಮ್ಮ ಮುಂದೆ ಇಟ್ಟುಕೊಳ್ಳಬೇಕು. ತಬ್ಲೀಗ್ ಮಾಡಲು ಮತ್ತು ಅದನ್ನು ವಿಶಾಲಗೊಳಿಸಲು ಅಲ್ಲಾಹನು ನಮಗೆ

ಮಾರ್ಗದರ್ಶನ ನೀಡಿದ್ದಾನೆ. ಇದು ಪವಿತ್ರ ಖುರ್‌ಆನ್‌ನಲ್ಲಿರುವ ಆಜ್ಞೆಯಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಇದನ್ನೇ ಹೇಳಿರುವರು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅಲ್ಲಾಹನು ಇದೇ ಆಜ್ಞೆ ನೀಡಿರುವನು. ನಾವು ತಬ್ಲೀಗ್‌ಗೋಸ್ಕರ ಬಲಿಷ್ಠವಾದ ಕಾರ್ಯಯೋಜನೆಯನ್ನು ರೂಪಿಸುವುದು ಆವಶ್ಯಕವಾಗಿದೆ. ಪ್ರತಿ ಸ್ಥಳದಲ್ಲಿಯೂ ಪ್ರತಿ ದೇಶದಲ್ಲಿಯೂ ಈ ಕೆಲಸ ಮಾಡಬೇಕು. ಈ ಕೆಲಸವನ್ನು ವಿಸ್ತಾರವಾಗಿ ಮಾಡಬೇಕು. ತಬ್ಲೀಗ್‌ನೊಂದಿಗೆ, ಬೈಅತ್ ಮಾಡಿ ಜಮಾಅತ್‌ನಲ್ಲಿ ಪ್ರವೇಶಿಸುವವರನ್ನು ಸಂರಕ್ಷಿಸುವುದು ಸಹ ಬಹಳ ದೊಡ್ಡ ಕೆಲಸವಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಖ್ವಾಜಾ ಕಮಾಲುದ್ದೀನ್ ಸಾಹೇಬರ ಬಗ್ಗೆ ಪ್ರಸ್ತಾಪಿಸುತ್ತಾ ಅವರು ತಮ್ಮ ಜ್ಞಾನವನ್ನು ಹೇಗೆ ವರ್ಧಿಸಿದರು ಮತ್ತು ಅವರ ಉತ್ತಮ ಭಾಷಣಗಳ ರಹಸ್ಯವೇನು ಎಂದು ವಿವರಿಸಿರುವರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಖ್ವಾಜಾ ಕಮಾಲುದ್ದೀನ್ ಸಾಹೇಬರ ಯಶಸ್ಸಿಗೆ ದೊಡ್ಡ ಕಾರಣವೇನೆಂದರೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಅಧ್ಯಯನ ಮಾಡಿ ಒಂದು ಭಾಷಣ ಸಿದ್ಧಪಡಿಸುತ್ತಿದ್ದರು. ಅನಂತರ ಖಾದಿಯಾನಿಗೆ ಬಂದು ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್‌ರೊಂದಿಗೆ ವಿಚಾರ ವಿನಿಮಯ ನಡೆಸುತ್ತಿದ್ದರು. ಮತ್ತು ಬೇರೆ ಕೆಲವು ಜನರನ್ನೂ ಕಾಣುತ್ತಿದ್ದರು. ಈ ರೀತಿ ಅವರು ಒಂದು ಭಾಷಣವನ್ನು ಪೂರ್ಣಗೊಳಿಸುತ್ತಿದ್ದರು. ಅನಂತರ ಹಿಂದೂಸ್ಥಾನದ ವಿವಿಧ ನಗರಗಳಿಗೆ ಸಂಚರಿಸಿ ಆ ಭಾಷಣ ಮಾಡುತ್ತಿದ್ದರು. ಮತ್ತು ಬಹಳ ಜಯಶಾಲಿ ಭಾಷಣಕಾರನಾಗಿ ಗುರುತಿಸಲ್ಪಡುತ್ತಿದ್ದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಮ್ಮ ಭಾಷಣಗಾರರು ಸಹ ಇದೇ ರೀತಿ ಚೆನ್ನಾಗಿ ವಿಷಯಗಳನ್ನು ಸಂಗ್ರಹಿಸಿ ಭಾಷಣ ತಯಾರು ಮಾಡಬೇಕು. ಅನಂತರ ಅವರು ಹೊರಗೆ ಹೋಗಿ ಈ ಭಾಷಣ ಮಾಡಬೇಕು. ಇದರಿಂದ ಪ್ರಯೋಜನವೇನೆಂದರೆ ಜಮಾಅತಿನ ಉದ್ದೇಶ ಲಕ್ಷ್ಯಗಳ ಪ್ರಕಾರ ಉತ್ತಮ ಭಾಷಣಗಳು ನಡೆಯುವುವು. ಹಾಗೂ ಅವರು ಮಾಡಿದ ಭಾಷಣದ ಬಗ್ಗೆ ನಮಗೆ ಸಹ ತಿಳಿಯುವುದು. ಮುಖ್ಯ ಭಾಷಣಗಳು ಯಾವಾಗಲೂ ಇದೇರೀತಿ ಇರಬೇಕು. ಬೇರೆ ಭಾಷಣಗಳನ್ನು ಸ್ಥಳೀಯ ಆವಶ್ಯಕತೆ ಪ್ರಕಾರ ಸಹ ಮಾಡಬಹುದಾಗಿದೆ.

ಈ ಮಾರ್ಗದರ್ಶಕ ತತ್ವ ಮುಬಲ್ಲಿಗರಿಗೋಸ್ಕರ ಮತ್ತು ದಾಯಿಈಲಿ ಇಲಲ್ಲಾಹ್ (ಅಲ್ಲಾಹನ ಕಡೆಗೆ ಕರೆ ನೀಡುವವರಿಗೆ)ರಿಗೋಸ್ಕರವಾಗಿದೆ. ಜ್ಞಾನವರ್ಧಕ ಸಭೆಗಳಲ್ಲಿ ಭಾಗವಹಿಸುವವರಿಗೆ ಸಹ ಇದು ಉಪಯೋಗಕರವಾಗಿದೆ. ಈ ರೀತಿ ಭಾಷಣಗಳನ್ನು ಸಿದ್ಧಪಡಿಸಿದರೆ ದೊಡ್ಡ ದೊಡ್ಡ ಪ್ರೊಫೆಸರ್‌ಗಳು, ಮತಧರ್ಮಗಳ ವಿದ್ವಾಂಸರೆಂದು ಹೇಳಿಕೊಳ್ಳುವವರು, ಧರ್ಮದ ವಿರುದ್ಧ ಆಕ್ಷೇಪ ಮಾಡುವವರು ಸಹ ಪ್ರಭಾವಿತರಾಗುತ್ತಾರೆ.

ನೆನಪಿಡಬೇಕಾದ ಇನ್ನೊಂದು ವಿಷಯವೇನೆಂದರೆ ಮುರಬ್ಬಿಗಳನ್ನು ಮತ್ತು ಮುಬಲ್ಲಿಗರನ್ನು ಯಾವ ರೀತಿಯಲ್ಲಿ ನೋಡಿಕೊಳ್ಳಬೇಕೋ ಆ ರೀತಿಯಲ್ಲಿ ಕೆಲವು ಸ್ಥಳಗಳಲ್ಲಿ ನೋಡಿಕೊಳ್ಳುವುದಿಲ್ಲ. ಎಂದರೆ ಜಮಾಅತಿನ ಜನರು ತಮ್ಮ ಮುರಬ್ಬಿಗಳನ್ನು ಮತ್ತು ಮುಬಲ್ಲಿಗರನ್ನು ಗೌರವಿಸಬೇಕಾದ ರೀತಿಯಲ್ಲಿ ಗೌರವಿಸುವುದಿಲ್ಲ. ಇದರ ಬಗ್ಗೆ ಕೆಲವು ಸ್ಥಳಗಳಿಂದ ಈಗಲೂ ದೂರುಗಳು ಬರುತ್ತಿವೆ. ಇವರೊಂದಿಗೆ ನಾನು ಹೇಳಲು ಬಯಸುವುದೇನೆಂದರೆ ಮುರಬ್ಬಿಗಳ ಮತ್ತು ಮುಬಲ್ಲಿಗರ ಹೊಣೆಗಾರಿಕೆ ಏನೆಂದರೆ ಅವರು ತಾವು ಇರುವ ಜಮಾಅತಿನಲ್ಲಿ ತಮ್ಮ ಗೌರವವನ್ನು ಕಾಪಾಡಲು ಜ್ಞಾನವನ್ನು ಗಳಿಸಲು ಮತ್ತು ಆಧ್ಯಾತ್ಮಿಕವಾಗಿ ಉನ್ನತ ಸ್ಥಾನವನ್ನು ಗಳಿಸಲು ಪ್ರಯತ್ನಿಸಬೇಕು. ಆ ರೀತಿ ಮಾಡಿದರೆ ಅವರ ಬಗ್ಗೆ ಜಮಾಅತಿನ ಯಾವ ವ್ಯಕ್ತಿಗೆ ಸಹ ತಪ್ಪು ಮಾತುಗಳನ್ನು ಹೇಳಲು ಧೈರ್ಯ ಉಂಟಾಗಲಾರದು. ಕೆಲವು ಸ್ಥಳಗಳಲ್ಲಿ ಕೆಲವು ಹುದ್ದೇದಾರರು ಸಹ ಮುರಬ್ಬಿಗಳ ಬಗ್ಗೆ ತಪ್ಪು ಮಾತುಗಳನ್ನು ಹೇಳುತ್ತಾರೆ. ಮುರಬ್ಬಿ ಯಾವುದಾದರೂ ಸುಧಾರಣೆ ಮಾಡಲು ಪ್ರಯತ್ನಿಸಿದರೆ ಅವರ ವಿರುದ್ಧ ಮಾತನಾಡಲು ಪ್ರಾರಂಭ ಮಾಡುತ್ತಾರೆ.

ಪ್ರಾರ್ಥನೆಗಳ ಅಂಗೀಕಾರದ ರಹಸ್ಯವೇನು? ಅದರ ಬಗ್ಗೆ ಸೂಕ್ಷ್ಮಜ್ಞಾನ ನೀಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ರೀತಿಯ ದೃಷ್ಟಾಂತಗಳನ್ನು ತೋರಿಸಲು ಆಗಮಿಸಿದ್ದಾರೆ. ಅವರು ಎಂತಹ ದಾಸರನ್ನು ಹುಟ್ಟುವಂತೆ ಮಾಡಲು ಉದ್ದೇಶಿಸಿದರೆಂದರೆ, ಅವರ ಪ್ರಾರ್ಥನೆಗಳ ಮೂಲಕ ಲೋಕದಲ್ಲಿ ದೊಡ್ಡ ದೊಡ್ಡ ಕ್ರಾಂತಿಗಳು ತಲೆದೋರುವಂತಾಗಬೇಕೆಂದು ಅವರು ಉದ್ದೇಶಿಸಿದ್ದರು. ಆದರೆ ಇದರ ಅರ್ಥ, ಅಲ್ಲಾಹನು ಪ್ರತಿಯೊಂದು ಪ್ರಾರ್ಥನೆಯನ್ನೂ ಅಂಗೀಕರಿಸುತ್ತಾನೆ ಎಂದಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪುತ್ರ ಮುಬಾರಕ್ ಅಹ್ಮದ್ ಮೃತರಾದರು. ಮೌಲವಿ ಅಬ್ದುಲ್ ಕರೀಮ್ ಸಾಹೇಬರೂ ಮೃತರಾದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರಿಗೋಸ್ಕರ ಪ್ರಾರ್ಥಿಸಿದರೂ ಅವರು ಮೃತರಾದರು. ಇದು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ದೃಷ್ಟಾಂತವಾಗಿದೆ. ಏಕೆಂದರೆ ಮಿರ್ಝಾ ಮುಬಾರಕ್ ಅಹ್ಮದ್ ಸಾಹೇಬರ ನಿಧನದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅದರ ಮೊದಲೇ ಪ್ರಕಟಿಸಿದ್ದರು. ಒಂದು ಘಟನೆ ಬಗ್ಗೆ ಅದು ಸಂಭವಿಸುವ ಮೊದಲೇ ಪ್ರಕಟಿಸಿದರೆ ಅದೊಂದು ದೃಷ್ಟಾಂತವಾಗುತ್ತದೆ. ಆದುದರಿಂದ ತಿಳಿಯಬೇಕಾದುದೇನೆಂದರೆ ಪ್ರತಿಯೊಂದು ಪ್ರಾರ್ಥನೆ ಅಂಗೀಕರಿಸಲ್ಪಡುವುದಿಲ್ಲ ಮತ್ತು ಪ್ರತಿಯೊಂದು ಪ್ರಾರ್ಥನೆ ತಿರಸ್ಕರಿಸಲ್ಪಡುವುದೂ ಇಲ್ಲ. ಅಲ್ಲಾಹನು ಯಾವ ಪ್ರಾರ್ಥನೆಯನ್ನು ಅಂಗೀಕರಿಸಲು ತೀರ್ಮಾನಿಸುತ್ತಾನೋ ಆ ಪ್ರಾರ್ಥನೆ ಖಂಡಿತವಾಗಿಯೂ ಅಂಗೀಕರಿಸಲ್ಪಡುತ್ತದೆ. ಅದನ್ನು ಯಾರೂ ತಡೆಯಲಾರರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ಸಂಬಂಧಿಸಿ ಕೆಲವು ಚಿಕ್ಕ ಚಿಕ್ಕ ವಿಷಯಗಳನ್ನು ಸಹ ವಿವರಿಸಿರುವರು. ಒಬ್ಬ ಗೂನು ಬೆನ್ನಿನ ಮುದುಕಿಯ ಉದಾಹರಣೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾ ಇದ್ದರು. ಅವಳೊಂದಿಗೆ ಜನರು ಕೇಳಿದರು– ನಿನ್ನ ಗೂನು ಬೆನ್ನು ಸರಿಯಾಗಬೇಕೆಂದು ನೀನು ಇಚ್ಛಿಸುತ್ತೀಯೋ ಅಥವಾ ಎಲ್ಲ ಜನರು ಗೂನು ಬೆನ್ನಿನವರಾಗಬೇಕೆಂದು ನೀನು ಬಯಸುತ್ತೀಯೋ? ಎಂದು ಕೇಳಿದರು. ಕೆಲವು ಜನರು ಹಟಮಾರಿಗಳಾಗಿರುತ್ತಾರೆ. ಅವರು ಅಸೂಯೆಯನ್ನು ಸಹ ಹೊಂದಿರುತ್ತಾರೆ. ಆ ಮುದುಕಿ ಹೀಗೆ ಹೇಳಿದಳು: ನಾನು ದೀರ್ಘಕಾಲದಿಂದ ಗೂನು ಬೆನ್ನಿನವಳಾಗಿ ಜೀವಿಸಿದೆ. ಜನರು ನನ್ನನ್ನು ನೋಡಿ ನಗುತ್ತಾ ಅಪಹಾಸ್ಯ ಮಾಡುತ್ತಾ

ಇದ್ದರು. ನನ್ನ ಬೆನ್ನು ಈಗ ಸರಿಯಾಗಲಾರದು. ನಾನು ಮುದುಕಿಯಾಗಿರುವೆನು. ಆದುದರಿಂದ ನನಗೆ ಸಂತೋಷ ಸಿಗಬೇಕಾದರೆ ಈ ಜನರೆಲ್ಲಾ ಗೂನು ಬೆನ್ನಿನವರಾಗಬೇಕು. ನಾನು ಅವರನ್ನು ನೋಡಿ ನಕ್ಕು ಅಪಹಾಸ್ಯ ಮಾಡಿ ನೆಮ್ಮದಿ ಹೊಂದಬೇಕು ಎಂದು ಹೇಳಿದಳು. ಹಝ್ರತ್ ಮುಸ್ಲಿಹ್ ಮೌಊದ್ ಹೇಳುತ್ತಾರೆ: ಇಂತಹ ಅಸೂಯೆಭರಿತ ಪ್ರಕೃತಿ ಹೊಂದಿದವರು ಸಹ ಕೆಲವರಿದ್ದಾರೆ. ಅವರಿಗೆ ತಮ್ಮ ಕಷ್ಟ ನಿವಾರಣೆಯಾಗಬೇಕೆಂಬ ಉದ್ದೇಶವಿರುವುದಿಲ್ಲ. ಅವರು ಬಯಸುವುದೇನೆಂದರೆ ಅನ್ಯರು ಸಹ ಕಷ್ಟಕ್ಕೆ ಗುರಿಯಾಗಬೇಕೆಂದು. ಆದುದರಿಂದ ಇಂತಹ ಅಸೂಯೆಗಾರರ ಉಪದ್ರವಗಳಿಂದ ರಕ್ಷಣೆ ಗಳಿಸಲು ನಮ್ಮ ಪೈಕಿ ಪ್ರತಿಯೊಬ್ಬನು ಪ್ರಾರ್ಥಿಸಬೇಕಾಗಿದೆ. ಅದೇ ರೀತಿ ನಾವು ಸಹ ಅಸೂಯೆಗಾರರೊಂದಿಗೆ ಸೇರಿದವರಾಗಬಾರದೆಂದು ಮತ್ತು ಇಂತಹ ಮಾತುಗಳನ್ನು ಹೇಳುವವರಾಗಬಾರದೆಂದು ಕೂಡ ಪ್ರಾರ್ಥಿಸಬೇಕು.

ಇನ್ನೊಂದು, ಒಬ್ಬ ಅಂಧನಿಗೆ ಸಂಬಂಧಿಸಿದ ಕಥೆಯಾಗಿದೆ. ಅದನ್ನು ವಿವರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾ ಇದ್ದರು: ಒಬ್ಬ ಅಂಧ ವ್ಯಕ್ತಿ ಇದ್ದ. ಅವನು ರಾತ್ರಿ ಹೊತ್ತು ಇನ್ನೊಬ್ಬನೊಂದಿಗೆ ಮಾತನಾಡುತ್ತಿದ್ದನು. ಆಗ ಒಬ್ಬನಿಗೆ ನಿದ್ರಿಸಲು ಕಷ್ಟವಾಗಿ ಅವನು ಅಂಧನೊಂದಿಗೆ ಹೇಳಿದನು: ಹಾಫಿಝ್ ಜೀ (ಅಂಧರಿಗೆ ಉರ್ದು ಭಾಷೆಯಲ್ಲಿ ಹಾಫಿಝ್ ಎಂದು ಸಹ ಹೇಳುತ್ತಾರೆ) ನೀವು ಮಾತನಾಡದೆ ನಿದ್ರಿಸಿರಿ. ಆಗ ಆ ಅಂಧ ವ್ಯಕ್ತಿ ಹೇಳಿದ: ನಾವು ನಿದ್ರೆ ಮಾಡುವುದೇನಿದೆ. ನಾವು ಮೌನವಾಗಿರುವುದೇ ನಮ್ಮ ನಿದ್ರೆಯಾಗಿದೆ. ಅಂಧ ಹೇಳಿದುದರ ಉದ್ದೇಶವೇನೆಂದರೆ, ಕಣ್ಣು ಮುಚ್ಚುವುದು ಮತ್ತು ಮೌನವಾಗಿರುವುದರ ಅರ್ಥವೇ ನಿದ್ರೆ. ನನ್ನ ಕಣ್ಣುಗಳು ಮೊದಲೇ ಮುಚ್ಚಿ ಕೊಂಡಿವೆ. ಈಗ ನಾನು ಮೌನವಾಗಿರಬೇಕಾಗಿದೆ ಅಷ್ಟು ಮಾತ್ರ. ನಾನು ಹಾಗೆ ಆಗಿ ಬಿಡುತ್ತೇನೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಸತ್ಯವಿಶ್ವಾಸಿಗೆ ಕಷ್ಟದ ಸ್ಥಿತಿ ಇರುತ್ತದೆ. ಅದು ಸತ್ಯವಿಶ್ವಾಸಿಗೆ ಕಷ್ಟಕರವಾಗಿರುವುದಿಲ್ಲ. ಏಕೆಂದರೆ ಅವನು ಹೇಳುತ್ತಾನೆ: ನಾನು ಮೊದಲಿನಿಂದಲೇ ಇಂತಹ ಸ್ಥಿತಿಗಳ ಅಭ್ಯಾಸ ಹೊಂದಿರುತ್ತೇನೆ. ಲೋಕದ ಜನರು ಸತ್ಯವಿಶ್ವಾಸಿಯನ್ನು ಕೊಲ್ಲಲು ಇಚ್ಛಿಸುವಾಗ ಅವನು ಹೇಳುತ್ತಾನೆ: ನನ್ನನ್ನು ಕೊಂದು ನೀವು ಏನು ಲಾಭ ಗಳಿಸುವಿರಿ. ನಾನು ಅಲ್ಲಾಹನಿಗೋಸ್ಕರ ಮೊದಲೇ ಮೃತನಾಗಿದ್ದೇನೆ. ಅಲ್ಲಾಹನು ಏನನ್ನು ಇಚ್ಛಿಸುತ್ತಾನೋ ಅದನ್ನು ಮಾಡಲು ನಾನು ಸಿದ್ಧನಾಗಿದ್ದೇನೆ. ಅವನಿಗೋಸ್ಕರ ನನ್ನ ಜೀವ ಅರ್ಪಿಸಲು ಸಹ ಸಿದ್ಧವಾಗಿದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಲೋಕದ ಜನರು ಮೃತ್ಯು ಬಗ್ಗೆ ಗಾಬರಿ ಹೊಂದಿರುತ್ತಾರೆ. ಆದರೆ ಒಬ್ಬ ಸತ್ಯವಿಶ್ವಾಸಿಯನ್ನು ಲೋಕ ಕೊಲ್ಲಲು ಇಚ್ಛಿಸಿದರೆ ಅವನು ಗಾಬರಿ ಹೊಂದುವುದಿಲ್ಲ. ಅವನು ಹೇಳುತ್ತಾನೆ: ಇಸ್ಲಾಮ್ ಧರ್ಮವನ್ನು ಅಂಗೀಕರಿಸಿದ ದಿನವೇ ನಾನು ಮೃತನಾದೆನು. ವ್ಯತ್ಯಾಸ ಕೇವಲ ಇದಾಗಿದೆ: ನಾನು ಚಲಿಸುವ ಮೃತದೇಹವಾಗಿದ್ದೇನೆ. ನೀವು ನನ್ನನ್ನು ನೆಲದೊಳಗೆ ಹೂಳಿದರೆ ನನಗೆ ಹೆಚ್ಚಿನ ವ್ಯತ್ಯಾಸವೇನೂ ಆಗಲಾರದು. ಸತ್ಯವಿಶ್ವಾಸಿಯಾಗಿರುವವನ ಯೋಚನೆ ಆ ರೀತಿ ಇರುತ್ತದೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಉದಾಹರಣೆ ನೀಡುತ್ತಾ ಹೇಳಿದರು: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾ ಇದ್ದರು– ಒಬ್ಬ ಜಿಪುಣ ಸ್ತ್ರೀ ಮದುವೆ ಸಮಾರಂಭಕ್ಕೆ ಹೋಗಿದ್ದಳು. ಅವಳ ನಾದಿನಿ ವಿಶಾಲ ಹೃದಯಿಯಾಗಿದ್ದಳು. ಎಂದರೆ ಅವಳು ಪಾರಿತೋಷಕ ನೀಡುವ ಮನೋಭಾವ ಹೊಂದಿದ್ದಳು. ಜಿಪುಣ ಸ್ತ್ರೀ ಒಂದು ರೂಪಾಯಿ ಪಾರಿತೋಷಕ ನೀಡಿದಳು. ಆದರೆ ಅವಳ ನಾದಿನಿ ಇಪ್ಪತ್ತು ರೂಪಾಯಿ ನೀಡಿದಳು. ಅವರಿಬ್ಬರೂ ಮದುವೆ ಸಮಾರಂಭದಿಂದ ಮರಳಿ ಬಂದಾಗ ಜಿಪುಣ ಸ್ತ್ರೀಯನ್ನು ಯಾರೋ ಪ್ರಶ್ನಿಸಿದರು: ಮದುವೆಗೆ ಹೋಗಿ ಏನು ಖರ್ಚು ಮಾಡಿದಿರಿ. ಆ ಜಿಪುಣ ಸ್ತ್ರೀ ಹೇಳಿದಳು ನಾನು ಮತ್ತು ನಾದಿನಿ ಸೇರಿ ಇಪ್ಪತ್ತೊಂದು ರೂಪಾಯಿ ಬಹುಮಾನವಾಗಿ ಕೊಟ್ಟೆವು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಕೆಲವು ಜಮಾಅತ್‌ಗಳಲ್ಲಿ ಕೆಲವು ವ್ಯಕ್ತಿಗಳು ಬಹಳ ಹೆಚ್ಚು ಚಂದ ಕೊಡುತ್ತಾರೆ. ಇಂತಹ ವಿಶಿಷ್ಟ ಚಂದಗಳನ್ನು ಜಮಾಅತ್‌ಗಳು ತಮ್ಮ ಜಮಾಅತ್ ಇಷ್ಟು ಚಂದ ನೀಡುತ್ತದೆ ಎಂದು ಹೇಳುವುದು ಮೇಲೆ ಹೇಳಿದ ಜಿಪುಣ ಸ್ತ್ರೀ 'ನಾನು ಮತ್ತು ನಾದಿನಿ ಇಪ್ಪತ್ತೊಂದು ರೂಪಾಯಿ ನೀಡಿದೆವು' ಎಂದು ಹೇಳಿದ ಹಾಗೆ ಆಗಿರುತ್ತದೆ. ಅದೇ ರೀತಿ ಕೆಲವು ಶ್ರೀಮಂತ ವ್ಯಕ್ತಿಗಳು ಜಿಪುಣರಾಗಿರುತ್ತಾರೆ. ಅವರು ಜಮಾಅತಿನ ಸಾಮೂಹಿಕ ಚಂದವನ್ನು ತಮ್ಮೊಂದಿಗೆ ಸೇರಿಸಿಕೊಂಡು ಹೇಳುತ್ತಾರೆಂಬ ಉದಾಹರಣೆಗಳು ದೊರೆತಿವೆ. ಅವರು ತಮ್ಮದೆಂದು ಹೇಳದೆ ಇದ್ದರೂ ನಮ್ಮ ಜಮಾಅತ್ ಇಷ್ಟು ಚಂದ ನೀಡುತ್ತದೆ ಎಂದು ಹೇಳುತ್ತಾರೆ. ಆ ಮೂಲಕ ಆ ಜಮಾಅತಿನಲ್ಲಿ ಎಲ್ಲರಿಗಿಂತ ಹೆಚ್ಚು ಚಂದ ನೀಡುವವರು ನಾವು ಎಂಬಂತೆ ಬಿಂಬಿಸುತ್ತಾರೆ. ಅಂತಹ ಜಮಾಅತ್‌ಗಳಲ್ಲಿ ಬಡವರಾದ ಜನರು ಚಂದ ಕೊಡುತ್ತಾ ಇರುತ್ತಾರೆ. ಆದರೆ ಶ್ರೀಮಂತರು ಆ ಬಡವರು ನೀಡುವ ಪ್ರಮಾಣ ಪ್ರಕಾರ ಚಂದವನ್ನು ನೀಡುತ್ತಿರುವುದಿಲ್ಲ.

ಒಮ್ಮೆ ಆಟಗಳನ್ನು ಆಡುವಾಗ ಕೆಲವು ತಪ್ಪು ಕೆಲಸಗಳು ನಡೆದುವು. ಧರ್ಮದ ನಿಯಮಗಳ ಬಗ್ಗೆ ಅಲ್ಲಿ ಶ್ರದ್ಧೆ ನೀಡಲಿಲ್ಲ. ಜಮಾಅತಿನ ಪರಂಪರಾಗತ ಆಚರಣೆಗಳನ್ನು ಗಮನಿಸಲಿಲ್ಲ. ಇದರ ಬಗ್ಗೆ ಎಚ್ಚರಿಕೆ ನೀಡುತ್ತಾ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು: ನೋಡಿರಿ, ನಗುವುದು, ತಮಾಷೆ ಮಾಡುವುದು ನಿಷಿದ್ಧವಾದುದೇನೂ ಅಲ್ಲ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಕ್ಕು ನಗಿಸುತ್ತಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸಹ ಹಾಗೆ ಮಾಡುತ್ತಿದ್ದರು. ನಾವು ಸಹ ನಗಿಸುವುದಿಲ್ಲ ಎಂದು ಹೇಳುವುದಿಲ್ಲ. ಆದರೆ ನಾವು ನಮ್ಮ ಮಕ್ಕಳೊಂದಿಗೆ, ಪತ್ನಿಯರೊಂದಿಗೆ ಮತ್ತು ಸಂಬಂಧಿಕರೊಂದಿಗೆ ತಮಾಷೆ ಮಾಡಿ ನಗುತ್ತೇವೆ. ಆದರೆ ನಾವು ತಮಾಷೆ ಮಾಡುವಾಗ ಯಾರನ್ನಾದರೂ ಹೀನೈಸುವಂತೆ ವರ್ತಿಸುವುದಿಲ್ಲ. ಯಾರದಾದರೂ ಆತ್ಮ ಗೌರವಕ್ಕೆ ಹಾನಿ ಉಂಟಾಗುವುದಾದರೆ ಅಂತಹ ತಮಾಷೆ ನಿಷಿದ್ಧವಾಗಿದೆ. ಬಾಯಿಯಿಂದ ಅನ್ಯರ ಗೌರವಕ್ಕೆ ಕುಂದುಂಟಾಗುವ ಮಾತುಗಳೇನಾದರೂ ಹೊರಟರೆ ನಾವು ಇಸ್ತಿಗ್‌ಫಾರ್ ಪ್ರಾರ್ಥನೆ ಮಾಡುತ್ತೇವೆ. ಪ್ರತಿಯೊಬ್ಬನು ಈ ಪ್ರಾರ್ಥನೆ ಮಾಡಬೇಕು. ನಾನು ನಿಮ್ಮನ್ನು ನಕ್ಕು ನಗಿಸುವ ಬಗ್ಗೆ ತಡೆಯುವುದಿಲ್ಲ. ಆದರೆ ಜಮಾಅತಿಗೆ ಅಪಕೀರ್ತಿ ಉಂಟಾಗುವ ರೀತಿಯಲ್ಲಿ ವರ್ತಿಸಬೇಡಿರಿ.

ಈಗ ಜಮಾಅತ್ ವತಿಯಿಂದ ಕೇವಲ ಖಾದಿಯಾನ್ ಮತ್ತು ರಬ್ವದಲ್ಲಿ ಮಾತ್ರವಲ್ಲ ಲೋಕದ ಇತರ ಸ್ಥಳಗಳಲ್ಲಿ ಕೂಡ ಆಟೋಟಗಳು ಜರಗುತ್ತವೆ. ಅಂತಹ ಸ್ಥಳಗಳಲ್ಲಿ ಜಮಾಅತಿಗೆ ಅಪಕೀರ್ತಿ ಸಂಭವಿಸುವ ಘಟನೆಗಳು ನಡೆಯಬಾರದು. ಪ್ರತಿಯೊಂದು ಸ್ಥಳದಲ್ಲಿ ಈ ವಿಷಯದ ಬಗ್ಗೆ ಜಾಗರೂಕತೆ ವಹಿಸಬೇಕು. ನಮ್ಮ ಪ್ರತಿಯೊಂದು ಕೆಲಸ, ಆಟೋಟಗಳು ಮತ್ತು ವಿನೋದ ಸಂಚಾರಗಳು ಕವಿಗೋಷ್ಠಿ ಮೊದಲಾದುವು ಹೇಗೆ ಜರಗಬೇಕೆಂದರೆ ಜಮಾಅತಿನ ಗೌರವಕ್ಕೆ ಹಾನಿ ಉಂಟಾಗಬಾರದು. ಜಮಾಅತಿನ ಗೌರವದ ಬಗ್ಗೆ ಯಾವಾಗಲೂ ಗಮನಿಸಬೇಕು.

ನಾನು ಪ್ರಸ್ತಾಪಿಸಿದ ಈ ವಿಷಯಗಳು ನೀತಿಪಾಠದಾಯಕವಾಗಿವೆ. ಈ ವಿಷಯಗಳನ್ನು ಯಾವಾಗಲೂ ನೆನಪಿನಲ್ಲಿಡಬೇಕಾದ ಅಗತ್ಯವಿದೆ. (ಅಲ್ಲಾಹನು ನಮಗೆ ತೌಫೀಕ್ ನೀಡಿ ಅನುಗ್ರಹಿಸಲಿ – ಆಮೀನ್).

*****

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 08-07-2016.*


**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*


**You can find all the Sermons archived at**: www.alislam.org/friday-sermon